ಶ್ರೀ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಒಟ್ಟು **16654**

ಆ) **1968**

ಇ) ಒಟ್ಟು **571 ಬಸ್ಸುಗಳು**

ಈ) **106**

ಉ) ಹಂತಹಂತವಾಗಿ ಹಳೆಯ ಬಸ್ಸುಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ

1553 (1944) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಹೊಸ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗಿದೆ, ಹಾಗೂ ಅವುಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗಿದೆ,

ಆ) ಸಿರ್ಸಿ ಹೊಸ ನಿಲ್ದಾಣ ಇನ್ನೂ ಯಾವುದೇ ಅಭಿವೃದ್ಧಿ ಆಗದೇ ಇರಲು ಕಾರಣಗಳೇನು,

ಇ) ನಿಲ್ದಾಣಕ್ಕೆ ಡಾಂಬರೀಕರಣ ಅಥವಾ ಸಿಮೆಂಟ್ ರಸ್ತೆಗಳನ್ನು ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಯಾವಾಗ ಕಲ್ಪಿಸಲಾಗುವುದು,

ಈ) ಸರ್ಕಾರ ಇದರ ಬಗ್ಗೆ ಗಂಭೀರ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಅನುಬಂಧ–ಅ ನಲ್ಲಿ ನೀಡಲಾಗಿದೆ

ಆ ಮತ್ತು ಇ) ಬಸ್ ನಿಲ್ದಾಣದ ಆವರಣಕ್ಕೆ ಡಾಂಬರೀಕರಣ ಅಳವಡಿಸಲು 2007–08 ನೇ ಸಾಲಿನಲ್ಲಿ 30 ಲಕ್ಷ ರೂ ಗಳ ಪ್ರಾವದಾನ ಮಾಡಲಾಗಿದೆ

ಈ) ಹೌದು

ಅನುಬಂಧ – ಅ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳು ಕಳೆದ 3 ವರ್ಷಗಳಲ್ಲಿ ನಿರ್ಮಿಸಿರುವ ಬಸ್ ನಿಲ್ದಾಣಗಳ ವಿವರ

1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮ – ಬಸ್ ನಿಲ್ದಾಣಗಳು

1) ನುಗ್ಗೇಹಳ್ಳಿ	2) ಕೊಟ್ಟಿಗೆಹಾರ	3) ಆಲೂರು
4) ಜಾವಗಲ್	5) ಕಳ್ಳಂಬಳ್ಳಿ	6) ಚಿಕ್ಕನಾಯಕನಹಳ್ಳಿ
7) ಶಿಡ್ಲಘಟ್ಟ	8) ಶ್ರೀನಿವಾಸಪುರ	9) ಕೆ ಜಿ ಎಫ್

10) ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬೆಂಗಳೂರು ನಗರ (ಎಂ ಸಿ ಟಿ ಸಿ)

11) ಚನ್ನಪಟ್ಟಣ	12) ಹೊನ್ನಾಳಿ	13) ಹೊಸೂರು
14) ಮಲೆಮಹದೇಶ್ವರ ಬೆಟ್ಟ	15) ಧರ್ಮಸ್ಥಳ	16) ಕುಕ್ಕೇಸುಬ್ರಹ್ಮಣ್ಯ
17) ಭದ್ರಾವತಿ	18) ನೆಲಮಂಗಲ	

2) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನಿಗಮ . – ಬಸ್ ನಿಲ್ದಾಣಗಳು

1) ಕಾವಲ್‌ಭೈರಸಂದ್ರ	2) ಆರ್ ಪಿ ಸಿ ಲೇಔಟ್
3) ಆಸ್ಟಿನ್ ಟೌನ್	4) ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶ
5) ಶಾಂತಿನಗರ	6) ಕಾಡುಗೋಡಿ
7) ರಾಜರಾಜೇಶ್ವರಿ ನಗರ	8) ನಾಗರಭಾವಿ

3) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನಿಗಮ – ಬಸ್ ನಿಲ್ದಾಣಗಳು

1) ಬಿಜಾಪುರ	2) ಗದಗ್	3) ತಿಳವಳ್ಳಿ
4) ಕಲ್ಲೋಳ್	5) ಕಟಗೋಳ್	7) ಕುಲಗೋಡ್
8) ಹುಲಿಕಟ್ಟಿ	9) ಕುರ್ತಕೋಟಿ	10) ಬೆಳ್ಳಟ್ಟಿ

5) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನಿಗಮ . – ಬಸ್ ನಿಲ್ದಾಣಗಳು

1) ಕಮಲನಗರ 2) ಕಿನ್ನಾಳ 3) ಕಾರಟಗಿ
4) ನೆಲಚರವು 5) ಕೂಡ್ಲಿಗಿ 6) ಹಗರಿಬೊಮ್ಮನಹಳ್ಳಿ
7) ಮಾನ್ವಿ

1554 (1945) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಮತ್ತು 2006–07 ರಲ್ಲಿ ರಾಜ್ಯದಲ್ಲಿ ಯಾವ ಯಾವ ಬಂದರು ಅಭಿವೃದ್ಧಿಗೆ ಎಷ್ಟೆಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ (ಬಂದರುವಾರು ಮಾಹಿತಿ ನೀಡುವುದು)

ಆ) 2005–06 ಮತ್ತು 2006–07 ರಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಬಿಡುಗಡೆಗೊಂಡ ಅನುದಾನದಲ್ಲಿ ಎಲ್ಲೆಲ್ಲಿ ಮತ್ತು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ,

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ,

ಈ) 2005–06 ಮತ್ತು 2006–07 ಕ್ಕೆ ಸಮುದ್ರ ಕೊರೆತ ತಡೆಗಟ್ಟಲು ಈ ಜಿಲ್ಲೆಗೆ ಬಿಡುಗಡೆಗೊಂಡ ಅನುದಾನವನ್ನು ಹಾಗೂ ಅದರಲ್ಲಿ ಎಲ್ಲೆಲ್ಲಿ ಮತ್ತು ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ (ವಿವರವಾದ ಮಾಹಿತಿ ಒದಗಿಸುವುದು)